# ಕರ್ನಾಟಕ ವಿಧಾನ ಪರಿಷತ್ತು

**ಚುಕ್ಕೆ ರಹಿತ ಪ್ರಶ್ನೆ ಸಂಖ್ಯೆ : 970 (1016)**

**ಸದಸ್ಯ ರಹೆಸರು : ಶ್ರೀ ರವಿಕುಮಾರ್ ಎನ್**
**(ವಿಧಾನಸಭೆಯಿಂದ ಚುನಾಯಿತರಾದವರು)**

**ಉತ್ತರಿಸುವ ದಿನಾಂಕ : 18-12-2024**

**ಉತ್ತರಿಸುವ ಸಚಿವರು : ಲೋಕೋಪಯೋಗಿ ಸಚಿವರು**

<table>
<tr><th>ಕ್ರ. ಸಂ</th><th>ಪ್ರಶ್ನೆ</th><th>ಉತ್ತರ</th></tr>
<tr><td>ಅ)</td><td>ಕೊಪ್ಪಳದ ಲೋಕೋಪಯೋಗಿ ಇಲಾಖೆಯಿಲ್ಲಿ ನಕಲಿ ಅಳತೆ ಮತ್ತು ಆರ್‌ಎ ಬಿಲ್ಲುಗಳನ್ನು ತಯಾರಿಸಿ ರೂ.1.78 ಕೋಟಿ ಮೊತ್ತವನ್ನು ಸರ್ಕಾರಕ್ಕೆ ವಂಚಿಸಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ; ಈ ಕುರಿತು ಸರ್ಕಾರದ ನಿಲುವೇನು;</td><td rowspan="3">ಭಾರತದ ಲೆಕ್ಕನಿಯಂತ್ರಕರು ಹಾಗೂ ಮಹಾಲೆಕ್ಕಪರಿಶೋಧಕರ 2019-20ನೇ ಸಾಲಿನ ವರದಿಯಲ್ಲಿ ಕೊಪ್ಪಳ ಲೋಕೋಪಯೋಗಿ ವಿಭಾಗದಲ್ಲಿ ನಕಲಿ ಅಳತೆ ಪುಸ್ತಕ ಹಾಗೂ ಬಿಲ್ಲುಗಳನ್ನು ಸಿದ್ಧಪಡಿಸಿ ರೂ.3.09 ಕೋಟಿ ಮೊತ್ತವನ್ನು ಸರ್ಕಾರಕ್ಕೆ ವಂಚಿಸಲಾಗಿರುತ್ತದೆ ಎಂದು ವರದಿಸಲಾಗಿತ್ತು.<br><br>ಈ ಹಿನ್ನೆಲೆಯಲ್ಲಿ ನಕಲಿ ಬಿಲ್ಲುಗಳ ಮೂಲಕ ಪಾವತಿಸಲಾಗಿದ್ದ ಹೆಚ್ಚುವರಿ ಮೊತ್ತವನ್ನು ಈಗಾಗಲೇ ಸಂಬಂಧಪಟ್ಟ ಗುತ್ತಿಗೆದಾರರಿಂದ ವಸೂಲಿಸಿ ಸರ್ಕಾರಕ್ಕೆ ಜಮೆ ಮಾಡಲಾಗಿರುತ್ತದೆ.<br><br>ಈ ಅಂಶವನ್ನು ಸಾರ್ವಜನಿಕ ಲೆಕ್ಕಪತ್ರ ಸಮಿತಿಯು ಪರಿಗಣಿಸಿ ಕಂಡಿಕೆಯನ್ನು ಮುಕ್ತಾಯಗೊಳಿಸಿರುತ್ತದೆ.</td></tr>
<tr><td>ಆ)</td><td>ನಕಲಿ ಅಳತೆ ಮತ್ತು ಆರ್ ಎ ಬಿಲ್ಲುಗಳನ್ನು ತಯಾರಿಸಿ ಗುತ್ತಿಗೆದಾರರಿಗೆ ಹೆಚ್ಚುವರಿ ಪಾವತಿಗೆ ಕಾರಣರಾದ ಎಇಇ ಮತ್ತು ಇಇ ಗಳನ್ನು ಅಮಾನತ್ತು ಮಾಡಲಾಗಿದೆಯೇ; ಯಾವಾಗ ಅಮಾನತ್ತು ಮಾಡಲಾಗುವುದು; ಅವರ ಮೇಲೆ ಕೈಗೊಂಡ ಶಿಸ್ತು ಕ್ರಮದ ವರದಿ ನೀಡುವುದು;</td></tr>
<tr><td>ಇ)</td><td>ನಕಲಿ ಅಳತೆ ಮತ್ತು ಆರ್ ಎ ಬಿಲ್ಲುಗಳನ್ನು ತಯಾರಿಸಿ ಗುತ್ತಿಗೆದಾರರಿಗೆ ಹೆಚ್ಚುವರಿ ಪಾವತಿಸಿದ ಮೊತ್ತವನ್ನು ವಸೂಲಿ ಮಾಡಲಿ ಕೈಗೊಂಡ ಕ್ರಮಗಳೇನು; ಸದರಿ ಮೊತ್ತವನ್ನು ನಕಲಿ ಬಿಲ್ಲು ತಯಾರಿಸಿ ಗುತ್ತಿಗೆದಾರರಿಗೆ ಪಾವತಿಸಿದ ಎಇಇ ಮತ್ತು ಇಇ ಗಳಿಂದಲೇ ಸದರಿ ಮೊತ್ತವನ್ನು ವಸೂಲು ಮಾಡಲು ಕ್ರಮಕೈಗೊಳ್ಳಲಾಗಿದೆಯೇ;? (ವಿವರ ನೀಡುವುದು)</td></tr>
</table>

ಸಂ:ಲೋಇ/1210/ಐಎಫ್‌ಎ/2024 (ಇ-ಕಛೇರಿ)

**ಸತೀಶಜಾರಕಿಹೊಳಿ**
(ಲೋಕೋಪಯೋಗಿ ಸಚಿವರು)